ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ,
ಉಡುಪಿ.

ಸಿ.ಸಿ.:1/2021

ಸಿ.ಡಬ್ಲ್ಯು. 7 ಪಿ.ಡಬ್ಯೂ : 5

| | |
|---|---|
| ಸಾಕ್ಷಿದಾರರ ಹೆಸರು | ನಿತಿನ್ |
| ತಂದೆಯ ಹೆಸರು | ಚಂದ್ರ ಪ್ರಸಾದ್ |
| ವಯಸ್ಸು | 34 ವರ್ಷ |
| ಉದ್ಯೋಗ | ಕೇಬಲ್ ಕೆಲಸ |
| ವಾಸಸ್ಥಳ | ಪಡುಬಿದ್ರಿ |

ದಿನಾಂಕಃ 23-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ

ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯವಿಲ್ಲ ಹಾಗೂ ನಾನು ಈ ಹಿಂದೆ ನೋಡಿರುವುದಿಲ್ಲ. ಸಾಕ್ಷಿಯವರು ನಿಪಿ.5 ಮತ್ತು 6 ರಲ್ಲಿ ನನ್ನ ಸಹಿ ಇದೆಂದು ಗುರ್ತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ.5(ಬಿ) ಮತ್ತು ನಿಪಿ.6(ಬಿ) ಎಂದು ಗುರ್ತಿಸಲಾಯಿತು. ನಿಪಿ.5 ಮತ್ತು 6 ರಲ್ಲಿ ಏನು ಬರೆದಿದೆಂದು ನನಗೆ ತಿಳಿದಿರುವುದಿಲ್ಲ. ಸುಮಾರು 5 ವರ್ಷಗಳ ಹಿಂದೆ ಪೋಲೀಸ್ ಠಾಣೆಯ ಬಳಿ ಬರುವಾಗ ಪೋಲೀಸಿನವರು ನನ್ನನ್ನು ಕರೆದು ಸಹಿ ಮಾಡಿಸಿಕೊಂಡರು. ನನ್ನ ಹಾಜರಿಯಲ್ಲಿ ಚಾ.ಸಾ.1 ರವರು ಯಾವುದೇ ಘಟನಾ ಸ್ಥಳವನ್ನು ತೋರಿಸಿರುವುದಿಲ್ಲ. ನಿಪಿ.1,7,8 ಮತ್ತು 9 ರಲ್ಲಿ ಕಾಣುವ ವಾಹನಗಳನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ನನ್ನ ಹಾಜರಿಯಲ್ಲಿ ಪೋಲೀಸಿನವರು ಯಾವುದೇ ಆರೋಪಿತರನ್ನು ದಸ್ತಗಿರಿ ಮಾಡಿರುವುದಿಲ್ಲ. ನಿಪಿ.2 ನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ನನ್ನ ಸಮಕ್ಷಮದಲ್ಲಿ ಯಾವುದೇ ಮೊಬೈಲ್ ಮತ್ತು ದಾಖಲೆಗಳನ್ನು ಜಪ್ತು ಮಾಡಿಕೊಂಡಿರುವುದಿಲ್ಲ. ಆರೋಪಿತರು ನನ್ನ ಸಮಕ್ಷಮದಲ್ಲಿ ಯಾವುದೇ ತಕ್ಷೀರು ಸ್ಥಳವನ್ನು ತೋರಿಸಿರುವುದಿಲ್ಲ. ಸಾಕ್ಷಿಯವರು 6 ದಾಖಲೆಗಳನ್ನು ನೋಡಿ ಅವುಗಳಲ್ಲಿ ನನ್ನ ಸಹಿ ಇದೆಂದು ಗುರ್ತಿಸಿರುತ್ತಾರೆ. ಸದರಿ ದಾಖಲೆಗಳು ಪಂಚನಾಮೆಗಳಾಗಿದ್ದು

ಅವುಗಳನ್ನು ಕ್ರಮವಾಗಿ ನಿಪಿ.12 ರಿಂದ ನಿಪಿ.17 ಎಂದು, ಸಾಕ್ಷಿಯವರು ನಿಪಿ.12 ರಿಂದ ನಿಪಿ.17 ರಲ್ಲಿರುವ ತಮ್ಮ ಸಹಿಗಳನ್ನು ನೋಡಿ ಗುರ್ತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.12(ಎ) ರಿಂದ ನಿಪಿ.17(ಎ) ಎಂದು ಗುರ್ತಿಸಲಾಯಿತು. ನಿಪಿ.12 ರಿಂದ ನಿಪಿ.17 ಕ್ಕೆ ಪೋಲೀಸ್ ಠಾಣೆಯಲ್ಲಿ ಸುಮಾರು 6 ವರ್ಷಗಳ ಹಿಂದೆ ಸಹಿ ಮಾಡಿರುತ್ತೇನೆ. ನಿಪಿ.12 ರಿಂದ ನಿಪಿ.17 ರಲ್ಲಿ ಏನು ಬರೆದಿದೆಂದು ಗೊತ್ತಿಲ್ಲ. ಸಾಕ್ಷಿಯವರು ಒಂದು ಭಾವಚಿತ್ರವನ್ನು ನೋಡಿ ಅದರಲ್ಲಿ ನಾನಿರುತ್ತೇನೆಂದು ಗುರ್ತಿಸಿದ್ದು ಸದರಿ ಭಾವಚಿತ್ರವನ್ನು ನಿಪಿ.18 ಎಂದು ಗುರ್ತಿಸಲಾಯಿತು. ನಿಪಿ.18 ನ್ನು ಯಾವ ಸಂದರ್ಭದಲ್ಲಿ ತೆಗೆದಿರುತ್ತಾರೆಂದು ನನಗೆ ಗೊತ್ತಿಲ್ಲ.

ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿ ಕೂಲ ಸಾಕ್ಷಿ ಎಂದು ತಿಳಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ ಅನುಮತಿಯನ್ನು ನೀಡಲಾಯಿತು.

ಪಾಟೀ ಸವಾಲುಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿನಾಂಕ 15.03.2019 ರಂದು ಚಾ.ಸಾ.1 ರವರು ಮರಳು ತುಂಬಿದ ಟಿಪ್ಪರ್ ನ್ನು ಇದೇ ಸ್ಥಳದಲ್ಲಿ ತಪಾಸಣೆ ಮಾಡಿರುವುದಾಗಿ ತಿಳಿಸಿದಂತೆ ನಿಪಿ.5 ರಂತೆ ಪಂಚನಾಮೆಯನ್ನು ಜರುಗಿಸಿರುತ್ತಾರೆಂದರೆ ಸರಿಯಲ್ಲ. ಅದೇ ದಿನ ನಿಪಿ.6 ರಂತೆ ಪಂಚನಾಮೆಯನ್ನು ಮಾಡಿ ತಕ್ಷೀರಿಗೆ ಬಳಸಿದ ಲಾರಿಯನ್ನು ಮತ್ತು ನಿಪಿ.2 ನ್ನು ವಶಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ದಿನಾಂಕ 15.03.2019 ರಂದು ಮಧ್ಯಾಹ್ನ 1.05 ರಿಂದ 1.30 ರವರೆಗೆ ನಿಪಿ.12 ರಂತೆ ಪಂಚನಾಮೆಯನ್ನು ಜರುಗಿಸಿ 7 ನೇ ಆರೋಪಿಯವರನ್ನು ದಸ್ತಗಿರಿ ಮಾಡಿ ಅವರ ಬಳಿ ಇದ್ದ ಓಪೋ ಮತ್ತು ನೊಕಿಯಾ ಮೊಬೈಲ್ ಗಳನ್ನು ಜಪ್ತುಪಡಿಸಿಕೊಂಡಿರುತ್ತಾರೆಂದರೆ

ಸರಿಯಲ್ಲ. ಅದೇ ದಿನ 7 ನೇ ಆರೋಪಿಯವರು ಮರಳನ್ನು ಅನ್ಲೋಡ್ ಮಾಡಿದ ಸ್ಥಳವೆಂದು ತೋರಿಸಿದ ಸ್ಥಳದಲ್ಲಿ ನಿಪಿ.13 ರಂತೆ ಪಂಚನಾಮೆಯನ್ನು ಮಧ್ಯಾಹ್ನ 2.30 ರಿಂದ 3.00 ರವರೆಗೆ ಜರುಗಿಸಿರುತ್ತಾರೆಂದರೆ ಸರಿಯಲ್ಲ. ಅದೇ ವೇಳೆ ನಿಪಿ.18 ರಂತೆ ಭಾವಚಿತ್ರವನ್ನು ತೆಗೆಸಿರುತ್ತಾರೆಂದರೆ ಸರಿಯಲ್ಲ. ಅದೇ ದಿನ 3.50 ರಿಂದ 4.15 ರವರೆಗೆ ನಿಪಿ.14 ರಂತೆ ಪಂಚನಾಮೆಯನ್ನು ಜರುಗಿಸಿ 4 ನೇ ಆರೋಪಿಯವರನ್ನು ದಸ್ತಗಿರಿ ಮಾಡಿ ಅವರ ಬಳಿ ಇದ್ದ ಜೆನ್ ಕಂಪೆನಿಯ ಮೊಬೈಲ್ ನ್ನು ಜಪ್ತುಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ಅದೇ ದಿನ 4 ನೇ ಆರೋಪಿಯವರು ಠಾಣೆಗೆ ಹಾಜರುಪಡಿಸಿದ ಕೆಎ-19-ಇಜೆ-2061 ವಾಹನವನ್ನು 4.20 ರಿಂದ 4.40 ರವರೆಗೆ ನಿಪಿ.15 ರಂತೆ ಪಂಚನಾಮೆಯನ್ನು ಮಾಡಿ ಜಪ್ತುಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ಅದೇ ದಿನ ಸಂಜೆ 5.20 ರಿಂದ 5.50 ರವರೆಗೆ ನಿಪಿ.16 ರಂತೆ ಪಂಚನಾಮೆಯನ್ನು ಮಾಡಿ 6 ನೇ ಆರೋಪಿಯವರನ್ನು ದಸ್ತಗಿರಿ ಮಾಡಿ ಅವರಿಂದ ಸ್ಯಾಮ್ ಸಂಗ್ ಮೊಬೈಲ್ ನ್ನು ಜಪ್ತುಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. 6 ನೇ ಆರೋಪಿಯವರು ಹಾಜರುಪಡಿಸಿದ ಕೆಎ-20-ಇಎಲ್-6952 ಮೋಟಾರ್ ಸೈಕಲ್ ನ್ನು ಸಂಜೆ 6.00 ರಿಂದ 6.30 ರವರೆಗೆ ನಿಪಿ.16 ರಂತೆ ಪಂಚನಾಮೆಯನ್ನು ಮಾಡಿ ವಶಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1,2,4 ಮತ್ತು 5 ನೇ ಆರೋಪಿಯವರ ಪರವಾಗಿ ಶ್ರೀ ಹೆಚ್.ಹೆಚ್.ಕೆ. ವಕೀಲರಿಂದಃ**

ನೀವು ಸಹಿ ಮಾಡಿರುತ್ತೇನೆಂದು ಗುರ್ತಿಸಿದ ದಾಖಲೆಗಳಲ್ಲಿ ಏನು ಬರೆದಿರುತ್ತಾರೆಂದುವು ನಿಮಗೆ ತಿಳಿದಿದೆಯೇ ಎಂದರೆ ಇಲ್ಲ. ನೀವು ಸದರಿ ದಾಖಲೆಗಳನ್ನು ಓದಿ ನೋಡಿರುತ್ತೀರಾ ಎಂದರೆ ಇಲ್ಲ. ನಿಮಗೆ ಪೋಲೀಸಿನವರು

ಓದಿ ಹೇಳಿರುತ್ತಾರಾ ಎಂದರೆ ಇಲ್ಲ. ಪೋಲೀಸಿನವರು ಕೇಳಿದ ಮೇರೆಗೆ ನೀವು ಸಹಿ ಮಾಡಿರುತ್ತೀರಿ ಎಂದರೆ ಹೌದು. ಭಾವಚಿತ್ರಗಳನ್ನು ಯಾವ ದಿನಾಂಕದಂದು ಯಾವ ಸಂದರ್ಭದಲ್ಲಿ ತೆಗೆದಿರುತ್ತಾರೆಂದು ಎನ್ನುವುದು ನಿಮಗೆ ಗೊತ್ತಿಲ್ಲವೆಂದರೆ ಹೌದು.

**ಪಾಟೀ ಸವಾಲುಃ 3 ಮತ್ತು 6 ನೇ ಆರೋಪಿಯವರ ಪರವಾಗಿ ಮೇಡಮ್ ಎನ್.ಎನ್. ವಕೀಲರಿಂದಃ**

1,2,4 ಮತ್ತು 5 ನೇ ಆರೋಪಿತರ ಪರವಾಗಿ ಮಾಡಿದ ಪಾಟೀ ಸವಾಲನ್ನು ಈ ಆರೋಪಿತರ ಪರವಾಗಿಯೂ ಅಳವಡಿಸಿಕೊಳ್ಳಬೇಕೆಂದು ಮನವಿ ಮಾಡಿದ್ದು, ಅವರ ಮನವಿಯನ್ನು ಅಂಗೀಕರಿಸಿ ಅಳವಡಿಸಿಕೊಳ್ಳಲಾಯಿತು.

**ಪಾಟೀ ಸವಾಲುಃ 7 ನೇ ಆರೋಪಿಯವರ ಪರವಾಗಿ ಶ್ರೀ ಜಿಜಿಎಸ್ ವಕೀಲರಿಂದಃ**

1,2,4 ಮತ್ತು 5 ನೇ ಆರೋಪಿತರ ಪರವಾಗಿ ಮಾಡಿದ ಪಾಟೀ ಸವಾಲನ್ನು ಈ ಆರೋಪಿತರ ಪರವಾಗಿಯೂ ಅಳವಡಿಸಿಕೊಳ್ಳಬೇಕೆಂದು ಮನವಿ ಮಾಡಿದ್ದು, ಅವರ ಮನವಿಯನ್ನು ಅಂಗೀಕರಿಸಿ ಅಳವಡಿಸಿಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ ಮತ್ತು ಎಸಿಜೆಎಂ   ಉಡುಪಿ.